ಗೆಳೆಯರೊಂದಿಗೆ ಅನೇಕ ಸಲ ಬಂದು ಹೋಗಿದ್ದಾರೆ. ಅವರಿಗೆ ಈ ಪರಿಸರ ಹೊಸದಲ್ಲ. ಇಲ್ಲಿ ಬಣ್ಣದ ಕಪ್ಪೆಗಳಿವೆ. ನೀಲಿ ಮತ್ತು ಕಿತ್ತಲೆ ಬಣ್ಣದ ವಿಶೇಷ ಹಪ್ಪಟ್ಟೆ ಹಾವುಗಳಿವೆ. ಇವೆಲ್ಲಾ ತೋರಿಸುವ ಅಸೆ ಹುಟ್ಟಿಸಿ ಶಶಿ ನಮ್ಮನ್ನು ಎತ್ತಾಕಿಕೊಂಡು ಬಂದಿದ್ದಾರೆ. ಈಗ ಮೊದಲು ಹೋಗಿ ರೂಮು ಸೇರಿ ಉಳಿದಿರುವ ಬಾಕಿ ನಿದ್ದೆಯನ್ನು ಮುಗಿಸಬೇಕು. ನಂತರ ಉಳಿದದ್ದು. ಬೇಗ ನಡೀರಿ ಎಂದು ಅಲ್ಲಿಂದ ಹೊರಟು ನಿಗದಿಯಾದ ರೂಮಿನ ಕಡೆ ಹೊರಟೆವು. ಮಳೆಗಾಳಿಯ ಹೊಡೆತಕ್ಕೆ ನಾವು ಉಳಿಯಲಿದ್ದ ರೂಮುಗಳು ಕೂಡ ತೊಪ್ಪೆಯಾಗಿದ್ದವು. ಇದು ಬೆಟ್ಟದ ತುದಿಯ ಊರಾದ ಕಾರಣ ಲಂಗುಲಗಾಮಿಲ್ಲದೆ ಗಾಳಿ ಬೀಸುತ್ತಿತ್ತು. ಸುಂಟರಗಾಳಿಯ ಮೈಗೆ ಮಳೆಯೂ ಅಪ್ಪಿಕೊಂಡು ಥಂಡಿಯ ಹೊಡೆತ ಚಾಟಿ ಏಟಾಗಿತ್ತು. ರೂಮಿನ ಬಾಗಿಲು ತೆಗೆಯುತ್ತಲೇ ಅಲ್ಲಿಗೂ ಚಳಿಗಾಳಿಯೂ, ಮಂಜಿನ ದಟ್ಟ ಹೊಗೆಯೂ ನುಗ್ಗಿ ಬಂದು ಹಿಮಾಲಯದಲ್ಲಿ ಉಳಿದ ನೆನಪನ್ನು ಮೂಡಿಸಿದವು.

'ನಮ್ಮ ಕಥೆ ಹಾಳಾಗಿ ಹೋಗಲಿ ಈ ಚಳಿಗಾಳಿಗೆ ನಮ್ಮ ಕ್ಯಾಮೆರಾ ಮತ್ತು ಲೆನ್ಸ್‌ಗಳನ್ನು ಜೋಪಾನ ಮಾಡಿಕೊಳ್ಳೋದು ಹೇಗೆ ಶಶಿ' ಎಂದು ಆತಂಕ ವ್ಯಕ್ತಪಡಿಸಿದೆ. ದೇವರಿಟ್ಟಂಗೆ ಆಗುತ್ತೆ ಬಿಡಿ ಸರ್. ಮತ್ತೊಮ್ಮೆ ಸಾಲ ಮಾಡಿ ಹೊಸ ಕ್ಯಾಮೆರಾ ಸೆಟ್ ತೆಗೊಂಡ್ರಾಯಿತು!' ಎಂದು ನಕ್ಕರು. ಇಂತಹ ಹವಾಮಾನ ವೈಪರೀತ್ಯದ ಸ್ಥಳಗಳಿಗೆ ಹೋಗಿ ಹಣಕಾಸಿನ ಭಾರಿ ನಷ್ಟ ಮಾಡಿಕೊಂಡ ಗೆಳೆಯ ಶ್ರೀಕಾಂತ್ ಆರಾಮಾಗಿ, ತಣ್ಣಗೆ ಇದ್ದದ್ದು ನೋಡಿ ಕೊಂಚ ನಿರಾಳ ಎನಿಸಿತು. ಶರಾವತಿ ಅಭಯಾರಣ್ಯದಲ್ಲಿ ಒಮ್ಮೆ ಮಳೆಗಾಳಿಗೆ ಸಿಕ್ಕು ನೀರು ಅವರ ಕ್ಯಾಮೆರಾದೊಳಗೆ ನುಗ್ಗಿ ಹೋಗಿ ದೊಡ್ಡ ಅನಾಹುತವೇ ಆಗಿತ್ತು. ರಿಪೇರಿಯ ನೆಪದಲ್ಲಿ ಕ್ಯಾಮೆರಾ ಕಂಪನಿಯವರು ಧಾರಾಳವಾಗಿ ಸುಲಿದಿದ್ದರು. ಅಸಲಿಗೆ ಕ್ಯಾಮೆರಾ ಕೊಳ್ಳುವುದು ಎಷ್ಟು ಕಷ್ಟವೋ ಅದರ ನಿರ್ವಹಣೆ ಕೂಡ ಅಷ್ಟೇ ನಾಜೂಕು. ಹೆಚ್ಚು ಕಮ್ಮಿಯಾಗಿ ಕ್ಯಾಮೆರಾ ಇಲ್ಲವೇ ಲೆನ್ಸುಗಳು ರಿಪೇರಿಗೆ ಬಂದರೆ ನಮ್ಮ ಕಣ್ಣು, ಕಿಡ್ನಿಗಳನ್ನೇ ಮಾರಿ ದುಡ್ಡು ಹೊಂಚಬೇಕು. ಆ ಮಟ್ಟಿಗೆ ಇವುಗಳ ಸರ್ವೀಸು ದುಬಾರಿ.

ಬೆಳಗಾನ ಎದ್ದು ಊರ ನೋಡಲು ಹೊರಟರೂ ಮತ್ತದೇ ಮಂಜಿನ ಕಾಟ. ಇಡೀ ರಸ್ತೆ, ಕಾಡು, ಬೆಟ್ಟ, ಮನೆ, ಜನ, ಎಲ್ಲವೂ ಹೊಗೆಯಲ್ಲಿ ಅವಿತುಕೊಂಡಂತೆ. ನಮ್ಮ ಕೆಮ್ಮಣ್ಣುಗುಂಡಿ, ನಂದಿ ಬೆಟ್ಟ, ಹಿಮವದ್ ಗೋಪಾಲಸ್ವಾಮಿಯ ಬೆಟ್ಟಗಳ ತರಹದ ಎತ್ತರದ ಗಿರಿಧಾಮವಿದು. ನಿಧಾನಕ್ಕೆ ಮೋಡಗಳ ಸೆರಗು ಕಣ್ಣು ತೆರೆದಾಗ ಕಾಣುವುದು ಸ್ವರ್ಗ ಸಮಾನ ಕಾಡಿನ ಸೌಂದರ್ಯ. ಜತೆಗೆ ಇಲ್ಲಿನ ಎತ್ತರದ ಬೆಟ್ಟಗಳ ಮೊಗದಿಂದ ನಿರಂತರ ಪ್ರಪಾತಕ್ಕೆ ಎರಗುವ ಧಾರಾಕಾರದ ಜಲಪಾತಗಳು. ನೀವು ಇಲ್ಲಿನ

